ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಒಬ್ಬ ಫ್ಯಾಕ್ಟರಿ ಕಾರ್ಮಿಕನಿಗೆ ಚಾಕುವನ್ನು ಉಪಯೋಗಿಸಿ ನರವನ್ನು ಕತ್ತರಿಸಿ ಹಾಕಿರುತ್ತಾರೆ. ಅವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿ ಅಲ್ಲಿ ಆಪರೇಷನ್ ಕೂಡ ಮಾಡಿರುತ್ತಾರೆ. ಅವರ ಹೆಸರನ್ನು ಕೊಟ್ಟರೆ ಏನಾದರೂ ಸಹಾಯ ಮಾಡಲು ಸಾಧ್ಯವೇ ?

ಶ್ರೀ ಡಿ ದೇವರಾಜ ಅರಸ್.—ಕೊಡಿ ಅದನ್ನು ಹೇಳುತ್ತೇನೆ.

(ii) re: Interruption in supply of ElectriCity in Belgaum City

SRI B. B. SAYANAK (Belgaum) .— Sri, I call the attention of the Minister of State for Information and Youth Services to the interruption in supply of electricity in Belgaum City.

SRI K. B. SHIVAIAH (Minister for Sericulture) .— Sir, on behalf of the Minister of State for Information and Youth Services, I wish to make the following statement:—

My attention has been called to the interruption in supply of electricity in Belgaum resulting in non-supply of water thereby inconveniencing both industrialists and the public and in this connection I make the following statement:

There were power interruptions in Belgaum City on the following days during January 1979.

10-1-1979	From	19-37	Hours	to 6-20	Hours.
13-1-1979	From	19-50	,,	0-27	,,
16-1-1979	From	11-36	,,	11-47	,,
		16-47	,,	16-56	,,
22-1-1979	From	12-58	,,	13-24	,,
		17-02	,,	17-25	,,
		20-05	,,	20-20	,,
28-1-1979	From	9-33	,,	16-46	,,

The unforeseen and long interruptions in power supply to Belgaum City on 10-1-1979 and 13-1-1979 were due to the snapping of conductor on 110 K. V. Hubli-Belgaum transmission line and failure of 11 K. V. pin insulators in the City area distribution system respectively. The interruptions on 16th and 22nd were due to the load shedding effected to restrict the load to the available generating capacity and expected imports. The interruption on 28-1-1979 was due to pre-arranged shut-down for maintenance works.

SRI B. B. SAYANAK.—The statement prepared by the Electricity Board is not correct; it is a bogus one. They have given statistics of the month of January only, but not February and March. Everyday there is interruption of power supply and that is why I have sent this notice. I request the Minister to set right things so that power supply is available to Belgaum City without interruptions.

SRI K. B. SHIVAIAH:-Sir, the statistics given are correct, of course, there were some interruptions. Arrangements are being made to improve the power supply and stop interruptions.

SRI B. B. SAYANAK :-I do not know why the department has given statistics of only January. There is interruption of power supply everyday and every Sunday there is no Electricity between 9-00 A.M. and 5-00 P. M.

SRI K. B. SHIVAIAH: Sir, the present generating capacity is only 950 MW against the demand of 1,250 MW. So, there is shortage of 300 MW. Arrangements are also being made to improve the power supply position to Belgaum City. The matter will be certainly looked into.

MATTER UNDER RULE 312.

(i) *re: Sittings of the Land Tribunals five days a week.*

ಶ್ರಿ ಜೆ. ಎಚ್. ಪಟೀಲ್ (ಚನ್ನಗಿರಿ):—ಮಾನ್ಯ ಅಧ್ಯಕ್ಷರೆ ಮಾನ್ಯ ರೆವಿನ್ಯೂ ಮಂತ್ರಿಗಳು ಮೊನ್ನೆ ದಿವಸ ಒಂದು ಉತ್ತರವನ್ನು ಕೊಟ್ಟಿರುತ್ತಾರೆ. ಅದೇನೆಂದರೆ ಭೂ ನ್ಯಾಯಮಂಡಲಿಗಳು ವಾರಕ್ಕೆ, ಐದು ದಿವಸಕ್ಕೆ ಒಂದುಸಾರಿ ಸೇರಿ ಅವುಗಳು ಹೊಂದಿರತಕ್ಕಂಥ ಕೇಸ್‌ಗಳನ್ನು ಆದಷ್ಟು ಜಾಗ್ರತೆಯಾಗಿ ತೀರ್ಮಾನ ಮಾಡಬೇಕು ಎನ್ನುವ ಬಗ್ಗೆ ಆದೇಶವನ್ನು ಕೊಟ್ಟಿರುತ್ತಾರೆ. ಇದರ ಬಗ್ಗೆ ನನ್ನದೇನು ಅಭ್ಯಂತರವಿಲ್ಲ. ನ್ಯಾಯಮಂಡಲಿಗಳಲ್ಲಿ ಆದಷ್ಟು ಬೇಗ ಕೇಸ್‌ಗಳು ತೀರ್ಮಾನವಾಗಬೇಕು ಎಂಬ ಮಾತನ್ನು ನಾನೂ ಒಪ್ಪುತ್ತೇನೆ. ಭೂಸುಧಾರಣೆ ಕೆಲಸ ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು. ಈಗ ಇಲ್ಲಿ ಬಂದಿರತಕ್ಕ ಸಮಸ್ಯೆ ಏನೆಂದರೆ ನಾವು ಕೂಡ ಅಂದರೆ ಶಾಸಕರೂ ಕೂಡ ಭೂ ನ್ಯಾಯ ಮಂಡಲಿಗಳಲ್ಲಿ ಸದಸ್ಯರಾಗಿರುತ್ತೇವೆ.

೨-೩೦ ಪಿ. ಎಂ.

ವಿಧಾನ ಮಂಡಲದ ಕಾರ್ಯಕಲಾಪಗಳು ನಡೆಯುವ ಹೊತ್ತಿನಲ್ಲಿ ಭೂ ನ್ಯಾಯ ಮಂಡಲಿಗಳ ಸಭೆಗಳೂ ನಡೆದರೆ ನಾವು ಅದಕ್ಕೆ ಪ್ರಾಮುಖ್ಯತೆ ಕೊಡಬೇಕೋ ಅಥವಾ ಇದಕ್ಕೆ ಪ್ರಾಮುಖ್ಯತೆ ಕೊಡಬೇಕೋ ? ನಾವು ಸದನದ ಕಾರ್ಯಕಲಾಪಗಳನ್ನು ಬಿಟ್ಟು ಭೂ ನ್ಯಾಯಮಂಡಲಿಗಳಲ್ಲಿ ಕುಳಿತುಕೊಳ್ಳೋಣವೇ ?ನಾನು ಭೂ ನ್ಯಾಯ ಮಂಡಲಿ ಕಡಿಮೆ, ಶಾಸನ ಸಭೆ ಜಾಸ್ತಿ ಇದಕ್ಕೆ ಹೆಚ್ಚು ಗೌರವವಿದೆ, ಅದಕ್ಕೆ ಕಡಿಮೆ ಗೌರವ ಇದೆ ಎಂಬ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲವೂ ಮುಖ್ಯವೇ ಆದರೆ ನಾವು ಇಂಥ ಸಂದರ್ಭದಲ್ಲಿ ಏನು ಮಾಡಬೇಕು ? ನಾವು ಎಲ್ಲಾದರೂ ಒಂದು ಕಡೆ ಕೆಲಸ ಮಾಡಬೇಕು ಎಂಬುದನ್ನು ತಮ್ಮ ಉದ್ದೇಶವೇ ? ಈಗ ಎಲ್ಲಾ ನ್ಯಾಯಮಂಡಲಿಗಳ ಮುಂದೆಯೂ ಸಮಾನವಾದ ರೀತಿಯಲ್ಲಿ ಕೇಸ್‌ಗಳಿಲ್ಲ. ಕೆಲವು ಕಡೆ ೮ ಸಾವಿರ ಇರಬಹುದು, ಕೆಲವು ಕಡೆ ೩೦೦ ಅಥವಾ ೪೦೦ ಕೇಸ್ ಗಳಿರಬಹುದು. ರೆಗ್ಯುಲರ್ ಸಬ್-ಡಿವಿಷನ್ ಆಫೀಸರ್‌ರವರು ನ್ಯಾಯಮಂಡಲಿಗೆ ಅಧ್ಯಕ್ಷರಾಗಿರುತ್ತಾರೆ. ಒಬ್ಬ ಅಧಿಕಾರಿಗೆ ಹಲವಾರು ಸಮಸ್ಯೆಗಳಿರುತ್ತವೆ. ಅವರು ಆಫೀಸ್ ಕೆಲಸ ಬಿಟ್ಟಿರಬೇಕಾಗುತ್ತದೆ. ಅದ್ದರಿಂದ ಸರ್ಕಾರದವರು ಏನಾದರೂ ಒಂದು ವಾರದಲ್ಲಿ ೫ ದಿವಸ ನ್ಯಾಯಮಂಡಲಿಗಳು ಕುಳಿತು ಕೆಲಸ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ ಅದು ವ್ಯಾವಹಾರಿಕವಲ್ಲ. ಆ ರೀತಿ ಮಾಡುವುದು ಕಷ್ಟವಾಗುತ್ತದೆ. ವಿಧಾನ ಸಭಾಧಿವೇಶನ ನಡೆಯುವ ಕಾಲದಲ್ಲಾದರೂ ನ್ಯಾಯಮಂಡಲಿಯ ಸಭೆಗಳನ್ನು ನಡೆಸದಿದ್ದರೆ ನಮಗೆ ಸ್ವಲ್ಪ ಅನುಕೂಲವಾಗುತ್ತದೆ. ಪೂರ್ಣಾವಧಿಗೆ ಅಲ್ಲದಿದ್ದರೂ ಸದನದ ಅಧಿವೇಶನದ ಕಾಲದಲ್ಲಾದರೂ ನ್ಯಾಯ ಮಂಡಲಿಯ ಸಭೆಗಳನ್ನು ಮುಂದೂಡಿದರೆ ಅದರಲ್ಲಿರುವ ಶಾಸಕರಿಗೆ ಅನುಕೂಲವಾಗುತ್ತದೆ. ಈ ತಿಂಗಳು ೧೯ನೇ ತಾರೀಖು ಬಜೆಟ್ ಅಧಿವೇಶನವನ್ನು ಕರೆದಿದ್ದೀರಿ. ಆದರೆ ಆವತ್ತಿನ ದಿನವೇ ನ್ಯಾಯಮಂಡಲಿ ಸಭೆಗೂ ಬರಬೇಕೆಂದು ನನಗೆ ನೋಟೀಸ್ ಕಳುಹಿಸಿದ್ದಾರೆ. ನಾನು ಎಲ್ಲಿಗೆ ಹೋಗ